C.C.
18114/2024
P W-1

**ಸಾಕ್ಷಿಯನ್ನು ದಿನಾಂಕ 17.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ನಾನು ಎಸ್ ಎಸ್ ಎಲ್ ಸಿ ಓದಿದ್ದೇನೆ. ನಾನು ಬೀರೇಶ್ವರ ನಗರದ ಚುಂಚನಘಟ್ಟ ಮೇನ್ ರೋಡ್, ಕೋಣನಕುಂಟೆ ಕ್ರಾಸ್, ಬೆಂಗಳೂರು-60ರಲ್ಲಿ ವಾಸ ಇದ್ದೇನೆ. ಸದರಿ ವಿಳಾಸದಲ್ಲಿ ನಾನು ಸುಮಾರು 20ವರ್ಷಗಳಿಂದ ವಾಸ ಇದ್ದೇನೆ. ನಾನು ಬಾರ್ ಅಂಡ್ ರೆಸ್ಟೋರೆಂಟ್ ಗೆ ಕ್ಯಾಷಿಯರ್. ಕನಕಪುರದ ರಸ್ತೆಯಲ್ಲಿರುವ ಕಾರ್ತಿಕ್ ಬಾರ್ ಅಂಡ್ ರೆಸ್ಟೋರೆಂಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಸದರಿ ಕಲಸವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಮಾಡುತ್ತಿಲ್ಲ. ನನಗೆ ಸದರಿ ಬಾರಿನಲ್ಲಿ ರೂ.25,000/-ತಿಂಗಳಿಗೆ ಸಂಬಳ ಬರುತ್ತದೆ. ಸದರಿ ಸಂಬಳದ ಬಗ್ಗೆ ಸಾಬೀತುಪಡಿಸಲು ನ್ಯಾಯಾಲಯಕ್ಕೆ ದಾಖಲೆ ಕೊಡಬಲ್ಲೆ.

2. ನಾನು ಆದಾಯ ತೆರಿಗೆ ಪಾವತಿ ಮಾಡುತ್ತೇನೆ. ಈ ಪ್ರಕರಣದ ಸಾಲದ ಬಗ್ಗೆ ನಾನು ಐಟಿಆರ್ ನಲ್ಲಿ ತೋರಿಸಿಲ್ಲ. ಸಾಲದ ಬಗ್ಗೆ ಐಟಿಆರ್ ನಲ್ಲಿ ತೋರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆರೋಪಿ ನನಗೆ ಸುಮಾರು 15ವರ್ಷಗಳಿಂದ ಪರಿಚಯ. ನಾವಿಬ್ಬರು ಒಂದೇ ಏರಿಯಾದಲ್ಲಿದ್ದೇವೆ. ಆರೋಪಿಯು ಶಾರದಾ ನಗರದಲ್ಲಿ ವಾಸ ಇದ್ದಾರೆ, ಆದರೆ ಅವರ ಮನೆಯ ವಿಳಾಸ ನನಗೆ ಗೊತ್ತಿಲ್ಲ, ಅವರ ಮನೆಯಲ್ಲಿ ಆರೋಪಿಯ ಅತ್ತೆ ಮತ್ತು ಗಂಡ ಇರುವ ಬಗ್ಗೆ ಮಾತ್ರ ನನಗೆ ಗೊತ್ತು. ಅತ್ತೆಯ ಹೆಸರು ಗೊತ್ತಿಲ್ಲ, ಗಂಡನ ಹೆಸರು ಸುರೇಶ್ ಸಿಂಗ್.

3. ಆರೋಪಿಯು ದಿನಾಂಕಃ17.12.2022ರಂದು ಹಣ ಕೇಳಿದರು. ಆರೋಪಿ ಮತ್ತು ಆತನ ಹೆಂಡತಿ ಇಬ್ಬರು ಶಾರದಾನಗರದಲ್ಲಿರುವ ಅಂಗಡಿಯ ಬಳಿ ಹಣ ಕೇಳಿದರು.

4. ಡಿಸೆಂಬರ್ 2022ರಲ್ಲಿ ನಾನು ಆರೋಪಿಗೆ ರೂ.4,00,000/-ನಿಜ ಅಲ್ಲವಾ ಎಂದರೆ ಹೌದು. ಆಗ ನಾನು ಭದ್ರತೆಗಾಗಿ ಎರಡು ಚೆಕ್ ಗಳನ್ನು ಪಡೆದಿದ್ದೆ ಎಂದರೆ ಸರಿಯಲ್ಲ, ಮೂರು ತಿಂಗಳ ಒಳಗೆ ಸಾಲವನ್ನು ಮರುಪಾವತಿಸುತ್ತೇವೆ ಎಂದು ತಿಳಿಸಿದ್ದರು. ಆರೋಪಿಯು ತನ್ನ ತವರು ಮನೆ ಆಸ್ತಿಯನ್ನು ಮಾರಾಟಕ್ಕಿಟ್ಟಿದ್ದರು, ಅದು ಮಾರಾಟವಾದರೆ ನಿಮ್ಮ ಹಣ ವಾಪಸ್ಸು ಕೊಡುತ್ತೇವೆ ಎಂದು ತಿಳಿಸಿದ್ದರು ಎಂದರೆ ಹೌದು. ದಿನಾಂಕಃ18.01.2023ರಂದು ಆರೋಪಿಯು ತನ್ನ ತಂದೆಯ ಹೆಸರಿನಲ್ಲಿದ್ದಂತಹ ಆಸ್ತಿಯನ್ನು ಮಾರಾಟ ಮಾಡಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ನನಗೆ ಯಾವುದೇ ಹಣ ಕೊಟ್ಟಿಲ್ಲ. ದಿನಾಂಕಃ18.01.2023ರ ನಂತರ ಆರೋಪಿ ಬಂದು ನನಗೆ ಹಣವನ್ನು ಕೊಟ್ಟರು ಎಂದರೆ ಸರಿಯಲ್ಲ.

5. ಹಣವನ್ನು ಕೊಟ್ಟಾಗ ಭದ್ರತೆಗಾಗಿ ಕೊಟ್ಟಿದ್ದಂತಹ ಎರಡು ಚೆಕ್ ಗಳನ್ನು ವಾಪಸ್ಸು ಕೊಡಬೇಕೆಂದು ಬೇಡಿಕೆ ಇಟ್ಟಿದ್ದರು, ಎಲ್ಲೋ ಇಟ್ಟಿದ್ದೇನೆ ಹುಡುಕಿಕೊಡುತ್ತೇನೆ ಎಂದು ಹೇಳಿ ಸದರಿ ಚೆಕ್ ಗಳನ್ನು ವಾಪಸ್ಸು ಕೊಟ್ಟಿಲ್ಲ ಎಂದರೆ ಸರಿಯಲ್ಲ. 2020ರಲ್ಲಿ ಭದ್ರತೆಗಾಗಿ ಕೊಟ್ಟಿರುವ ಚೆಕ್ ಗಳನ್ನು ನಾನು ದುರುಪಯೋಗಪಡಿಸಿಕೊಂಡು ದಿನಾಂಕಃ 05.02.2024ರಂದು ಹೆಚ್ಚಿನ ಹಣಕ್ಕಾಗಿ ಭದ್ರತೆಗಾಗಿ ಕೊಟ್ಟಿರುವಂತಹ ಚೆಕ್ ಗಳನ್ನು ನಗದೀಕರಣಕ್ಕಾಗಿ ಹಾಕಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ01.03.2024ರಂದು ಆರೋಪಿಯು ನಾನು ಕೊಟ್ಟಿರುವಂತಹ ನೋಟೀಸಿಗೆ ಪ್ರತಿ ಉತ್ತರವನ್ನು ನೀಡಿ ಯಾವುದೇ ಸಾಲದ ಹಣ ಬಾಕಿ ಇಲ್ಲವೆಂದು ತಿಳಿಸಿರುವುದಕ್ಕೆ ಯಾವುದಾದರೂ ಪ್ರತಿ ಉತ್ತರ ನೀವು ನೀಡಿರುತ್ತೀರಾ ಎಂಬ ಪ್ರಶ್ನೆಗೆ ನನಗೆ ಯಾವುದೇ ಪ್ರತಿ ಉತ್ತರದ ನೋಟೀಸು ಬಂದಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ಪ್ರತಿ ಉತ್ತರದ ನೋಟೀಸನ್ನು ನೀಡಿದ್ದರೂ ಸಹ ಅವರ ಮೇಲೆ ಸುಳ್ಳು ಆರೋಪ ಮಾಡಿ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

6. ನಾನು ನೀಡಿರುವಂತಹ ನೋಟೀಸಿಗೆ ಆರೋಪಿ ಕೊಟ್ಟಿರುವಂತಹ ಪ್ರತಿ ಉತ್ತರವನ್ನು ನಮ್ಮ ವಕೀಲರು ನನಗೆ ತಿಳಿಸಿದರು. ನಾನಾಗಲೀ ಅಥವಾ ನಮ್ಮ ವಕೀಲರಾಗಲೀ ಸದರಿ ನೋಟೀಸಿನ ಪ್ರತಿ ಉತ್ತರಕ್ಕೆ ಯಾವುದೇ ಪ್ರತಿ ಉತ್ತರವನ್ನು ಕೊಟ್ಟಿಲ್ಲ. ಆರೋಪಿಯು ಯಾವುದೇ ಸಾಲದ ಬಾಕಿಯನ್ನು ಕೊಡಬೇಕಾಗದಿದ್ದರೂ ಸಹ ಭದ್ರತೆಗಾಗಿ ನೀಡಿರುವಂತಹ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಕೇಸನ್ನು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,**
**ಬೆಂಗಳೂರು.**